MR. SPEAKER.—The question is :

That the Schedule stand part of the Bill.

The motion was adopted.

The schedule was added to the Bill.

MR. SPEAKER.—The question is :

That Clause 1, the Title and the Preamble stand part of the Bill

The motion was adopted.

Clause 1, the Title and the Preamble were added to the Bill.

Motion to Pass

SRI B. D. JATTI.—I beg to move :

hat the Mysore Appropriation (No. 2) Bill, 1965, be passed.

MR. SPEAKER.—The question is :

That the Mysore Appropriation (No. 2) Bill, 1965, be passed.

The motion was adopted.

THE MYSORE LABOUR WELFARE FUND BILL, 1965.

Motion to Consider.

SRI D. DEVARAJ URS (Minister for Labour and Housing).—I beg to move that the Mysore Labour Welfare Fund Bill, 1965, be taken into consideration.

MR. SPEAKER.—Motion moved that :

The Labour Welfare Fund Bill, 1965, be taken into consideration.

MR. SPEAKER.—The House will now rise and meet after half an hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ, ಈಗ ಈ ಮಾನ್ಯ ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆ ಕಾರ್ಖಾನೆಗಳ ಕೆಲವು ಯೋಗಕ್ಷೇಮಗಳನ್ನು ಸಾಧಿಸುವ ಬಗ್ಗೆ ನಮ್ಮ ಸಂಸ್ಥಾನದಲ್ಲಿ 16 ವೆಲ್‌ಫೇರ್ ಸೆಂಟರುಗಳಿವೆ. ಅವುಗಳ ಬಗ್ಗೆ ಮೈಸೂರು ವಿಶಾಲವಾದ ಮೇಲೆ ಬೊಂಬಾಯಿ ಪ್ರಾಂತದಿಂದ ಬಂದಿರತಕ್ಕಂಥ 3 ಜಿಲ್ಲೆಗಳಲ್ಲಿ ಮಾತ್ರ ಈ ಲೇಬರ್ ವೆಲ್‌ಫೇರ್ ಫಂಡ್ ಆಕ್ಟ್ ಎಂದು ಬೊಂಬಾಯಿ ಪ್ರಾಂತದ ಕಾನೂನು ಜಾರಿಯಲ್ಲಿದೆ. ಈ ಕಾನೂನು ಇಡೀ ಸಂಸ್ಥಾನಕ್ಕೆ ಅನ್ವಯಿಸಲಲ್ಲ. ಈಗ ಈ ಸಭೆಯ ಮುಂದೆ ಇರತಕ್ಕಂಥ ಈ ಮಸೂದೆ ಇಡೀ ಸಂಸ್ಥಾನಕ್ಕೆಲ್ಲಾ ಅನ್ವಯಿಸುವ ಹಾಗೆ ಮಂಡಿಸಿದೆ. ಇದರ ಉದ್ದೇಶ ಅನೇಕ ಕಾರ್ಖಾನೆಗಳಲ್ಲಿ ಕೆಲಸಗಾರರು ತಮಗೆ ಬರತಕ್ಕ ವೇತನವನ್ನು ಕೆಲವು ಕಾರಣಗಳಿಂದ ಅವರು ತೆಗೆದುಕೊಳ್ಳುವುದಕ್ಕೆ ಅನಾನುಕೂಲ ಗಳಾಗಿರುತ್ತವೆ. ಮತ್ತು ಅದಕ್ಕೆ ವಾರಸುದಾರರು ಇಲ್ಲದೆ ಆ ವೇತನದ ಮೊಬಲಗು ಮಾಲೀಕರ ಬಳಿಯೇ ಉಳಿಯುವ ಸಂದರ್ಭವಿದೆ. ಮತ್ತೆ ಕಾರ್ಖಾನೆಗಳಲ್ಲಿ ಕೆಲವು ಸಂದರ್ಭಗಳಲ್ಲಿ ಕಾನೂನು ವಿರೋಧವಾಗಿ ಅಲ್ಲಿನ ನಡೆವಳಿಕೆಗಳ ವ್ಯತಿರಿಕ್ತವಾಗಿ ಕೆಲಸಗಾರರು ನಡೆದಾಗ ಅವರ ಮೇಲೆ ಫೈನ್ ವಗೈರೆ ಹಾಕಿದಾಗ ಆ ಫೈನ್ ಮೊತ್ತ ಕೂಡ ಕಾರ್ಖಾನೆಯ ಮಾಲೀಕರುಗಳಲ್ಲಿಯೇ ಉಳಿಯುತ್ತದೆ. ಈ ಮೊತ್ತವನ್ನು ಒಂದು ವೆಲ್‌ಫೇರ್ ಬೋರ್ಡ್ ಎಂದು ಮಾಡಿ ಆ ಬೋರ್ಡಿನ ವ್ಯಾಪ್ತಿಗೆ ಈ ಹಣವನ್ನು ಕೊಟ್ಟು ಆ ಬೋರ್ಡಿನವರು 4 ವರ್ಷಗಳ ಕಾಲ ಆ ಕಾರ್ಖಾನೆಗಳಿಂದ ಬಂದಂಥ ಅದರಲ್ಲೂ ತಕ್ಷಣದಲ್ಲಿ ಕಾರ್ಮಿಕರ ವಾರಸುದಾರರು ಗೊತ್ತಿಲ್ಲದೆ ಹೋಗಿ ಬಿಟ್ಟುಹೋದಂಥ ಹಣವನ್ನು ಈ ಬೋರ್ಡಿಗೆ ಮಾಲೀಕರು ತಲುಪಿಸುವುದು ಮತ್ತು ಫೈನ್ ಹಾಕಿರತಕ್ಕ ಮೊತ್ತವನ್ನೂ ಸಹ ಬೋರ್ಡಿಗೆ ಕೊಡಬೇಕೆಂದಿದೆ. ಇದನ್ನು ಬೋರ್ಡಿನವರು 4 ವರ್ಷಗಳ ಕಾಲ ತಮ್ಮ ಬಳಿಯಲ್ಲಿಯೇ ಇಟ್ಟುಕೊಂಡು 4 ವರ್ಷಗಳೊಳಗೆ ನೋಟೀಸ್ ವಗೈರೆ ಕೊಟ್ಟು ಈ ಬಗ್ಗೆ ಕಾರ್ಮಿಕರ ಲೀಗರ್ ಸಕ್ಸೆಸರ್ಸ್ ಯಾರು ಇರುತ್ತಾರೋ ಅವರುಗಳೇ ಕಾರ್ಮಿಕರ ಪರವಾಗಿ ಈ ನಾಲ್ಕು ವರ್ಷಗಳಲ್ಲಿ ಕ್ಲೇಮ್ ಮಾಡಬಹುದು. ಹಾಗೆಯೇ 4 ವರ್ಷಗಳಲ್ಲಿ ಕಾನೂನು ರೀತ್ಯ ಇರತಕ್ಕ ಹಾಗೆ ವಾರಸುದಾರರು ಯಾರೂ ತೆಗೆದುಕೊಳ್ಳುವುದಕ್ಕೆ ಬಾರದಿದ್ದರೆ 4 ವರ್ಷಗಳ ಮೇಲೆ ಆ ಹಣ ಬೋರ್ಡಿನಲ್ಲಿಯೇ ಉಳಿಯುತ್ತದೆ. ಹಾಗೆಯೇ ಇತರೇ ರೀತಿಯಲ್ಲಿ ಬರತಕ್ಕ ಹಣವನ್ನು 3ನೇ ಸೆಕ್ಷನ್ ಸಬ್ ಕ್ಲಾಜ್ (ಸಿ) ನಲ್ಲಿ ಹೇಳಿರುವ ಹಾಗೆ ವಾಲಂಟರಿ ಡೊನೇಷನ್ ಫಂಡ್ಸ್ ಮತ್ತು ಬೇರೆ ರೀತಿಯಲ್ಲಿ ಬರತಕ್ಕ ಬಾರೊ ಮಾಡಿದ ಹಣ—ಇವೆಲ್ಲವನ್ನೂ ಬೋರ್ಡಿನವರು ಕಾರ್ಮಿಕರ ಹಿತರಕ್ಷಣೆಗೆ ಸಾಧನೆ ಮಾಡುವುದಕ್ಕೆ ಉಪಯೋಗಿಸತಕ್ಕದ್ದು ಎಂಬುದೇ ಈ ಕಾನೂನು ತಂದಿರುವ ಉದ್ದೇಶ. ಈಗ ಹಳೆಯ ಮೈಸೂರು ಸಂಸ್ಥಾನದಲ್ಲಿ ನಾನು ಮೊದಲೇ ತಿಳಿಸಿದ ಹಾಗೆ ಸುಮಾರು 16 ಸೆಂಟರುಗಳಿವೆ. ಈ ಕಾನೂನು ವ್ಯಾಪ್ತಿ ಎಲ್ಲಾ ಕಡೆಯೂ ಇಲ್ಲದೇ ಇರುವ ಕಾರಣ ಮೊದಲನೆಯ ತೊಂದರೆ ಅಂದರೆ, ಬೊಂಬಾಯಿ ಕರ್ಣಾಟಕ ಬಿಟ್ಟು ಬೇರೆ ಮೈಸೂರಿನ ಭಾಗಗಳಲ್ಲಿ ಅನ್‌ಕ್ಲೇಮ್ಡ್ ಮನಿ ಯಾವುದು, ಫೈನ್ ಹಾಕಿದ ಹಣ ಯಾವುದು ಎನ್ನುವುದನ್ನು ಕಂಡುಹಿಡಿಯಲು ಯಾವ ಏಜೆನ್ಸಿ ಇಲ್ಲ. ಅವೆಲ್ಲವನ್ನೂ ಒಂದು ಕಡೆ ಸೇರಿಸಿ ಶೇಖರಣೆ ಮಾಡಿ ಕಾರ್ಮಿಕರ ಹಿತರಕ್ಷಣೆಗೆ ಉಪಯೋಗ ಮಾಡುವುದಕ್ಕೆ ಅದು ಒಂದು ತೊಂದರೆ ಇದೆ. ಎರಡನೆಯದಾಗಿ ಈಗಿರತಕ್ಕ ಬೊಂಬಾಯಿ ಪ್ರಾಂತದ, ಮಹಾರಾಷ್ಟ್ರ ಪ್ರಾಂತದ ಕಾನೂನು ಜಾರಿಯಲ್ಲಿದೆ. ನಾವೂ ಸಹ ಆ ಕಾನೂನನ್ನು ಚಲಾಯಿಸಿರತಕ್ಕದ್ದಾಗಿದೆ. ಮೈಸೂರು ಸರ್ಕಾರದವರು ಲೇಬರ್ ಆಕ್ಟ್ ಪ್ರಕಾರ ಈ ಬಗ್ಗೆ ಒಂದು ಆಜ್ಞೆ ಹೊರಡಿಸಬೇಕೆಂದು ಕೇಂದ್ರ ಸರ್ಕಾರದ ಒಂದು ಆಜ್ಞೆ ಹೊರಡಿಸಲಾಯಿತು. ಆ ಆಜ್ಞೆ ಪ್ರಕಾರ ಮೈಸೂರು ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದಾರೆ. ಈ ರೀತಿ ಬೊಂಬಾಯಿ ಕಾನೂನನ್ನು ಮೈಸೂರು ಸರ್ಕಾರದವರು ಬೊಂಬಾಯಿನಿಂದ ಬಂದಿರತಕ್ಕ ಪ್ರಾಂತ್ಯಗಳಲ್ಲಿ ಚಲಾಯಿಸಬಹುದು ಎಂದು ಹೇಳಿ ಹಾಗೆಯೇ ಅದರ ಜೊತೆಯಲ್ಲಿ ಒಂದು ಆದೇಶ ಇಂಡಿಯಾ ಸರ್ಕಾರದ್ದು ಇತ್ತು. ಅದೇನೆಂದರೆ ಬೇರೆ ಒಂದು ಹೊಸ ಕಾನೂನನ್ನು ಈ ಬಗ್ಗೆ ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂಬುದು ಸುಮಾರು 1959ನೇ ಇಸವಿಯಲ್ಲಿ ಈ ಆಜ್ಞೆ ಹೊರಟು ಅದು ಕೇವಲ ಎರಡು ವರ್ಷಗಳಲ್ಲಿಯೇ ಹೊಸ ಕಾನೂನು ಜಾರಿಗೆ ತರಬೇಕೆಂದು ತೀರ್ಮಾನವಾಗಿದ್ದರೂ ಆ ರೀತಿ ಆದನ್ನು ಜಾರಿಗೆ ತರುವುದಕ್ಕೆ ಸ್ವಲ್ಪ ವಿಧಾನವಾಯಿತು. ಈಗ ಈ ವಿಧೇಯಕವನ್ನು ತಮ್ಮ ಮುಂದಿಡುವುದಕ್ಕೆ ಅವಕಾಶವಾಗಿದೆ. ಈ ವಿಧೇಯಕದಲ್ಲಿ ನಾವು 3ನೇ ಕ್ಲಾಜು ಪ್ರಕಾರ ವೆಲ್‌ಫೇರ್ ಫಂಡ್ ಎಂದರೆ ಏನು, ಆದರಲ್ಲಿ ಯಾರ್ಯಾರದು ವೆಲ್‌ಫೇರ್ ಫಂಡಿಗೆ ಸೇರಬಹುದು ಎಂಬುದು ನಮೂದಾಗಿದೆ. ಇನ್ನು 4ನೇ ಕಾಜಿನಲ್ಲಿ ಬೋರ್ಡ್ ರಚನೆ ಮಾಡತಕ್ಕದ್ದು ಹೇಗೆ, ಅದರಲ್ಲಿ ಯಾವ ಪ್ರತಿನಿಧಿ ಇರಬೇಕು, ಅವರ ವ್ಯಾಪ್ತಿ ಏನು ಎಂಬುದನ್ನು ನಮೂದು ಮಾಡಿದೆ. 7ನೇ ಕ್ಲಾಜಿನಲ್ಲಿ ಹೇಗೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದು, ಬರತಕ್ಕ ಹಣವನ್ನು ಯಾವರೀತಿ ಬೋರ್ಡಿನವರು

ವಿಲೇವಾರಿ ಮಾಡಬೇಕು, ಯಾವ ಕಾಲಕ್ಕೆ ಬೋರ್ಡಿನ ಸ್ಕೀಮು ಉಳಿಯುತ್ತದೆ ಎಂಬುದನ್ನು ನಮೂದು ಮಾಡಿದೆ. 8ನೇ ಕ್ಲಾಜಿನಲ್ಲಿ ಈ 4 ವರ್ಷಗಳು ಕಳೆದ ಮೇಲೆ ಇದಕ್ಕೆ ಯಾರು ವಾರಸುದಾರರು ಇಲ್ಲದೆ ಹೋದರೆ ಆ ಹಣ ಬೋರ್ಡಿನ ಸ್ಕೀಮು ಆಗತಕ್ಕದ್ದು ಎಂದು ಹೇಳಿದೆ. ನಂತರ ವೆಲ್‌ಫೇರ್ ಸೆಂಟರ್‌ಮುಖೇನ ಈ ಬೋರ್ಡಿನವರು ಈ ಹಣವನ್ನು ಉಪಯೋಗಮಾಡಿ ಸಬ್‌ಕ್ಲಾಜ್ (2) ಕ್ಲಾಜ್ 8ರಲ್ಲಿ ನಮೂದಿಸಿರತಕ್ಕ ಅನೇಕ ಉದ್ದೇಶಗಳಿಗೆ ಈ ಹಣವನ್ನು ಉಪಯೋಗ ಮಾಡಬಹುದು ಎಂಬುದಾಗಿ ನಮೂದು ಮಾಡಿದೆ. ಈ ಹಣವಲ್ಲದೆ ಬೇರೆ ಕಡೆಯಿಂದಲೂ ಕೂಡ ಸಾಲವಾಗಿ ವೆಲ್‌ಫೇರ್ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶಕ್ಕೆ ಪಡೆದ ಹಣವನ್ನು ಬೋರ್ಡಿನವರು ಪಡೆಯಬಹುದು ಎಂಬುದಾಗಿ ಇದರಲ್ಲಿ ಅಧಿಕಾರವಿದೆ. ಈ ಬೋರ್ಡಿನ ಪರವಾಗಿ ಒಬ್ಬ ಎಗ್ಸಿಕ್ಯುಟೀವ್ ಆಫೀಸರನ್ನು ನೇಮಕ ಮಾಡುವುದು ಸೂಕ್ತ ಮತ್ತು ಒಬ್ಬ ವೆಲ್‌ಫೇರ್ ಕಮಿಷನರ್ ಎಂಬುದಾಗಿ ನೇಮಿಸುವುದಕ್ಕೂ ಕೂಡ ಸೆಕ್ಷನ್ 12ರ ಪ್ರಕಾರ ನಮೂದಾಗಿದೆ. ಮತ್ತು ಬೋರ್ಡಿನವರು ತಮಗೆ ಬೇಕಾದಂತಹ ಫ್ಯಾಕ್ಟರಿಗಳಲ್ಲಿ ಆಗಿಂದಾಗ್ಗೆ ಲೆಕ್ಕಪತ್ರಗಳನ್ನು ನೋಡುವುದಕ್ಕೂ, ಅಲ್ಲಿ ಅಕ್ಯುಮುಲೇಟ್ ಆಗಿರತಕ್ಕ ಹಣವನ್ನು ಪಡೆಯುವುದಕ್ಕೂ, ಮತ್ತು ಒಳ್ಳೆಯ ಆಡಳಿತವನ್ನು ನಡೆಸುವುದಕ್ಕೂ ಒಬ್ಬರು ಇನ್‌ಸ್ಪೆಕ್ಟರನ್ನು ನೇಮಕ ಮಾಡಿಕೊಳ್ಳಬಹುದು ಎಂದು ಇದೆ. ಮತ್ತು ಬೋರ್ಡಿನವರಿಗೆ ಬೇಕಾದಂತಹ ಸಿಬ್ಬಂದಿಯನ್ನು ಅವರು ನೇಮಕ ಮಾಡಿಕೊಳ್ಳತಕ್ಕಂಥ ಅವಕಾಶವನ್ನು ಈ ಬಿಲ್ಲಿನಲ್ಲಿ ನಮೂದು ಮಾಡಲಾಗಿದೆ.

ಆಮೇಲೆ ಸೆಕ್ಷನ್ 17ರಲ್ಲಿ Mode of recovery of sums payable into Fund as arrears of land revenue ಎಂದು ಇದೆ. ಫ್ಯಾಕ್ಟರಿಗಳು ಯಾವುದಾದರೂ ಅಮೌಂಟ್ ವೆಲ್‌ಫೇರ್ ಫಂಡಿಗೆ ಕೊಡಬೇಕಾದ್ದು ಇದ್ದರೆ ಅದನ್ನು ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಎಂದು ಭಾವನೆ ಮಾಡಿಕೊಂಡು ಎಲ್ಲಾ ಅರಿಯರ್ಸ್‌ನ್ನೂ ರಿಕವರ್ ಮಾಡಿಕೊಳ್ಳಬಹುದು.

ಆಮೇಲೆ ಸೆಕ್ಷನ್ 19ರಲ್ಲಿ ಬೋರ್ಡಿನವರು ಅಧಿಕಾರವನ್ನು ಚಲಾಯಿಸುವುದಕ್ಕೆ ನಿಬಂಧನೆಗಳನ್ನು ಮಾಡಬೇಕು ಎಂದು ಇದೆ; ಮತ್ತು ಅವರು ಇಂತಿಂಥಾ ಕೆಲಸಗಳನ್ನು ಮಾಡಬಹುದು ಎಂದು ಇದೆ. ಈ ಮಸೂದೆಯ ಪ್ರಕಾರ ಆಗಿಂದಾಗ್ಗೆ ಮಾಡತಕ್ಕ ರೂಲ್ಸುಗಳನ್ನೂ, ನಿಬಂಧನೆಗಳನ್ನೂ ಈ ಮಾನ್ಯ ಸಭೆಯ ಮುಂದೆ ಇಟ್ಟು ಅವುಗಳಿಗೆ ಈ ಮಾನ್ಯ ಸಭೆಯವರ ಒಪ್ಪಿಗೆಯನ್ನು ಪಡೆಯಬೇಕು ಎಂದು ಸೆಕ್ಷನ್ 23ರಲ್ಲಿ ನಮೂದಾಗಿದೆ.

ಇನ್ನೊಂದು ವಿಚಾರವೇನೆಂದರೆ, ಬೋರ್ಡಿನವರಿಗೆ ಬಂದಂತಹ ಹಣ ಯಾರಿಗೆ ಸೇರಬೇಕು ಎನ್ನತಕ್ಕಂಥ ವಿಚಾರದಲ್ಲಿ ತೀರ್ಮಾನ ಮಾಡತಕ್ಕವರು ಯಾರು ಎಂದರೆ ಪೇಮೆಂಟ್ ಆಫ್ ವೇಜಸ್ ಆಕ್ಟ್ ಪ್ರಕಾರ ಯಾವ ಅಧಿಕಾರಿಗೆ ಈ ಒಂದು ಅಧಿಕಾರವನ್ನು ಚಲಾಯಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೋ ಆ ಅಧಿಕಾರಿಗಳು ಈ ಹಣವನ್ನು ಯಾರಿಗೆ ಕೊಡಬೇಕು, ವಾರಸುದಾರರು ಯಾರು ಎಂಬುದನ್ನು ನಿಗದಿ ಮಾಡತಕ್ಕ ಅಧಿಕಾರಗಳು ಅವರಿಗೆ ಇರುತ್ತವೆ. ಒಂದು ವೇಳೆ ಆ ಹಣಕ್ಕೆ ವಾರಸುದಾರರು ಯಾರೂ ಇಲ್ಲ ಎಂದು ಆ ಅಧಿಕಾರಿಗಳು ತೀರ್ಮಾನವನ್ನು ಕೊಟ್ಟಾಗ ಮಾತ್ರ ಅದು ಬೋರ್ಡಿನ ಸ್ಕೀಮು ಆಗುತ್ತದೆ. ತದನಂತರ ಬೋರ್ಡಿನವರು ಆ ಹಣವನ್ನು ಕಾರ್ಮಿಕರುಗಳಿಗೆ ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತದೆ. ಬೊಂಬಾಯಿ ಕರ್ನಾಟಕ ಭಾಗದ ಕೆಲವು ಫ್ಯಾಕ್ಟರಿಗಳಲ್ಲಿ 1956ನೇ ಇಸವಿಯಿಂದ 1962ನೇ ಇಸವಿಯ ವರೆಗೆ ಫೈನು, ಅನ್‌ಕ್ಲೈಮ್ಡ್ ಮತ್ತು ಅನ್‌ಪೇಡ್ ವೇಜಸ್ ಸುಮಾರು 18 ಸಾವಿರ ರೂಪಾಯಿಗಳವರೆಗೂ ರಿಕವರ್ ಮಾಡತಕ್ಕದ್ದು ಇದೆ. ಹಳೆಯ ಮೈಸೂರು, ಹೈದರಾಬಾದ್ ಕರ್ನಾಟಕ, ಮಂಗಳೂರು, ಮತ್ತು ಕೊಡಗು ಭಾಗಗಳಲ್ಲಿ ಎಷ್ಟು ಹಣ ಬರಬೇಕೆಂಬುದಕ್ಕೆ ಇನ್ನೂ ಲೆಕ್ಕವನ್ನು ಕೊಟ್ಟಿಲ್ಲ. ಅದನ್ನೆಲ್ಲಾ ಕಲೆಕ್ಟ್ ಮಾಡುವುದಕ್ಕೆ ಸರಿಯಾದಂತಹ ಒಂದು ಕಾನೂನು ಇರಲಿಲ್ಲ. ಈ ಫ್ಯಾಕ್ಟರಿಗಳಲ್ಲಿ ಎಷ್ಟು ಹಣ ಬರಬೇಕೆಂಬುದನ್ನು ಹುಡುಕುವುದಕ್ಕೆ ಯಾರೂ ಹೋಗಿಲ್ಲ. ಅಂತೂ ಈ ಭಾಗದ ಫ್ಯಾಕ್ಟರಿಗಳವರು ಹತ್ತಾರು ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಒಂದು ಅಂದಾಜನ್ನು ಹೇಳುತ್ತಾರೆ. ಫೈನಾನ್ಸಿಯಲ್ ಮೆಮೋರಾಂಡಂ ಅನ್ನೂ ಕೂಡ ಈ ಮಸೂದೆಗೆ ಲಗತ್ತಿಸಿದೆ. ಇದರಲ್ಲಿ ಅಂದಾಜು ಪ್ರಕಾರ ಒಂದುಲಕ್ಷ ಎರಡು ಸಾವಿರ ರೂಪಾಯಿಗಳವರೆಗೂ ರೆಕರಿಂಗ್ ಎಕ್ಸ್‌ಪೆಂಡಿಚರ್ ಆಗತಕ್ಕದ್ದನ್ನು ಕಲೆಕ್ಟ್ ಮಾಡುತ್ತಾರೆ. ಕಾಲಕ್ರಮೇಣ ಈ ಬೋರ್ಡು ಅಸ್ತಿತ್ವಕ್ಕೆ ಬಂದು ಅದರ ಕಾರ್ಯವನ್ನು ನಡೆಸಿಕೊಂಡು ಹೊರಟಮೇಲೆ ಕೆಲವಾರು ವರ್ಷಗಳಲ್ಲಿ ಈ ರೀತಿಯಾಗಿ ವರ್ಷೇ ವರ್ಷೇ ಬರತಕ್ಕ ಅನ್‌ಕ್ಲೈಮ್ಡ್ ಅಂಡ್ ಅನ್‌ಪೇಡ್ ವೇಜಸ್, ಫೈನ್ಸ್ ಮತ್ತು ಇತರೇ ಹಣದಿಂದ ಬೋರ್ಡು ತನ್ನಕಾಲುಮೇಲೆ ತಾನು ನಿಂತು ಸರ್ಕಾರದಿಂದ ಯಾವ ಸಹಾಯವನ್ನು ಪಡೆಯದ ರೀತಿ ಆಗತಕ್ಕಂಥ ಒಂದು ಅವಕಾಶ ಇದೆ. ಸದ್ಯಕ್ಕೆ ಮಾತ್ರ ಸರ್ಕಾರದವರು ರೆಕರಿಂಗ್ ಎಕ್ಸ್‌ಪೆಂಡಿಚರ್ ಕೊಡಬೇಕಾಗಿ ಬರುತ್ತದೆ. ಇಷ್ಟು ಈ ಮಸೂದೆಯಲ್ಲಿ ಅಡಕವಾಗಿರತಕ್ಕ ಮುಖ್ಯ ವಿಚಾರಗಳು. ಇದು ಸಾಧುವಾಗಿದೆ ಮತ್ತು ಇದು ಕಾರ್ಮಿಕರ ಹಿತದೃಷ್ಟಿಯಿಂದ ನಡೆಸತಕ್ಕ ವೆಲ್‌ಫೇರ್ ಸೆಂಟರ್

(ಶ್ರೀ ಡಿ. ದೇವರಾಜ ಅರಸ್)

ಗಳು ಏನಿವೆಯೋ ಅವುಗಳ ಮುಖೇನ ಈ ರೀತಿಯಾಗಿ ಬೋರ್ಡು ಹಣವನ್ನು ಖರ್ಚು ಮಾಡುವುದಕ್ಕೆ ಕಾನೂನನ್ನು ರಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಮಾನ್ಯ ಸಭೆಯವರು ಈ ಮಸೂದೆಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ.—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ತಂದಿರತಕ್ಕ ಮೈಸೂರು ರಾಜ್ಯದ ಕಾರ್ಮಿಕರ ಕಲ್ಯಾಣ ನಿಧಿಗೆ ಸಂಬಂಧಪಟ್ಟ ವಿಧೇಯಕ ಏನಿದೆ ಇದು ಒಂದು ಸಂತೋಷದಾಯಕವಾದ ಸಂಗತಿಯಾಗಿದೆ. ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುತ್ತಾ ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಹಿಂದೆ ಇದ್ದಂತಹ ಬೊಂಬಾಯಿ ಲೇಬರ್ ವೆಲ್‌ಫೇರ್ ಫಂಡ್ ಆಕ್ಟ್ ಮುಖಾಂತರ ಈ ಮಸೂದೆಯನ್ನು ತಂದು ಒಂದು ಏಕರೀತಿಯಾದಂತಹ ಒಂದು ಕಾನೂನನ್ನು ಮಾಡಿ ಅದನ್ನು ಇಡೀ ರಾಜ್ಯಕ್ಕೆಲ್ಲಾ ಅನ್ವಯವಾಗುವಂತೆ ಮಾಡಬೇಕು ಎನ್ನುವ ದೃಷ್ಟಿಯಿಂದ ಈಗ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದೇವೆಂದು ಹೇಳಿದರು. ಈ ವಿಷಯವನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಕೂಡ ಹೇಳಿದ್ದಾರೆ. ಮುಂಬೈ ಕರ್ಣಾಟಕದಲ್ಲಿರತಕ್ಕ ಕೆಲವು ಕಂಪೆನಿಗಳಲ್ಲಿ ಈ ಒಂದು ಲೇಬರ್ ವೆಲ್‌ಫೇರ್ ಫಂಡಿಗೆ ಸಂಬಂಧಪಟ್ಟ ಹಾಗೆ ಸುಮಾರು 18—20 ಸಾವಿರ ರೂಪಾಯಿಗಳ ಬಾಕಿ ಬರಬೇಕಾಗಿದೆ ಎಂದು ಹೇಳಿದರು. ಈಗ ಬಾಕಿ ಬರಬೇಕಾಗಿರತಕ್ಕ ಕಂಪೆನಿಗಳೆಲ್ಲವೂ ಜೀವಂತವಾಗಿವೆಯೇ ಹೇಗೆ ಎಂಬುದನ್ನು ನಾವು ಒಮ್ಮೆ ನೋಡಬೇಕಾಗಿದೆ. ಈಗ ನನಗೆ ತಿಳಿದಿರುವ ಹಾಗೆ ಎಷ್ಟೋ ಕಂಪೆನಿಗಳು ಹೋಗಿವೆ. ಅದನ್ನೂ ಸಹ ಗಮನದಲ್ಲಿಟ್ಟುಕೊಂಡು ಈ ಸಮಯದಲ್ಲಿ ನಾನು ಕೆಲವು ವಿಷಯುಗಳನ್ನು ಹೇಳಬಯಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ನನಗೆ ಬಂದಿರತಕ್ಕ ಇನ್‌ಫರ್‌ಮೇಷನ್ ಪ್ರಕಾರ ಬೊಂಬಾಯಿ ಕರ್ಣಾಟಕದಲ್ಲಿ ಲೇಬರ್ ವೆಲ್‌ಫೇರ್ ಫಂಡಿಗೆ ಸಂಬಂಧಪಟ್ಟ ಹಾಗೆ ಬಾಕಿ ಬರಬೇಕಾಗಿರತಕ್ಕ ಕಂಪೆನಿಗಳ ಹೆಸರುಗಳು ಇವೆ. ಅದನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಇಂಡಿಯನ್ ಹ್ಯೂಮ್ ಪೈಪ್ ಕಂಪೆನಿ, ಹುಬ್ಬಳ್ಳಿ, ಥರ್ಮಲ್ ಸ್ಟೇಷನ್, ಎಂ. ಎಸ್. ಇ.ಬಿ. ಘಟಪ್ರಭ; ಇಂಡಿಯನ್ ಪ್ಲೈವುಡ್ ಮ್ಯಾನುಫಾಕ್ಚರಿಂಗ್ ಕಂಪೆನಿ ದಾಂಡೇಲಿ, ಗೋಕಾಕ್ ಮಿಲ್ಸ್, ಸಿರಾಮಿಕ್ಸ್ ಪ್ರಾಜೆಕ್ಟ್ಸ್ ಲಿಮಿಟೆಡ್, ಖಾನಾಪೂರ; ನಂದಿ, ಹನಬು, ಸೌಂದತ್ತಿ ಈ ಮಿಲ್ಲುಗಳಿಂದ ಬಾಕಿ ಬರಬೇಕಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ತಾವು ಲೇಬರ್ ವೆಲ್‌ಫೇರ್ ಬೋರ್ಡನ್ನು ರಚನೆ ಮಾಡುವಾಗ ಇದರಿಂದ ಕಾರ್ಮಿಕರಿಗೆ ಒಂದು ಹೆಚ್ಚಿನದಾದ ಉಪಯೋಗವಾಗಬೇಕು. ಆದರೆ ಈ ಮಸೂದೆಯನ್ನು ನೋಡಿದರೆ ಆದಷ್ಟು ಮಟ್ಟಿಗೆ ಸರ್ಕಾರದವರು ಒಂದು ಹೆಚ್ಚಿನದಾದ ಅಧಿಕಾರವನ್ನು ಇಟ್ಟುಕೊಂಡು ಸರ್ಕಾರದವರು ಈ ಬೋರ್ಡನ್ನು ರಚಿಸಿದ್ದಾರೆಂದು ಕಾಣುತ್ತದೆ. ಪ್ರತಿಯೊಂದು ವಿಷಯದಲ್ಲಿಯೂ ಬೋರ್ಡಿಗೆ ಅಧಿಕಾರವಿಲ್ಲದೆ ಅದು ಎಲ್ಲಾ ಕೆಲಸಗಳನ್ನು ಸರ್ಕಾರದ ಮುಖಾಂತರ ಮಾಡುವುದಾದರೆ ಅದು ಬಹಳ ಕಷ್ಟವಾಗುತ್ತದೆ. ಮತ್ತು ಇದರಿಂದ ಕಾರ್ಮಿಕರಿಗೆ ಸಕಾಲದಲ್ಲಿ ಲಭಿಸತಕ್ಕಂಥ ಅನುಕೂಲ ಮತ್ತು ಸೌಲಭ್ಯಗಳು ಏನಿವೆಯೋ ಅವು ಲಭಿಸದೇ ಹೋಗುವುವು ಎಂದು ನಾನು ಹೇಳುತ್ತೇನೆ.

ಇನ್ನು ಸೆಕ್ಷನ್ 3ರಲ್ಲಿ ಲೇಬರ್ ವೆಲ್‌ಫೇರ್ ಫಂಡ್ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ಇದರಲ್ಲಿ ಕಂಪೆನಿಯ ಕೆಲಸಗಾರರಿಗೆ ಯಾರು ಫೈನ್ ಹಾಕುತ್ತಾರೆ, ಇದರ ವಿಚಾರವೇನು ಎನ್ನತಕ್ಕ ಬಗ್ಗೆ ಈ ಮಸೂದೆಯಲ್ಲಿ ಸರಿಯಾದಂತಹ ವಿವರಣೆಯನ್ನು ಕೊಟ್ಟಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಲೇಬರ್ ಆಕ್ಟಿನಲ್ಲಿ ಆ ವಿಷಯುಗಳನ್ನೆಲ್ಲಾ ಹಾಕಿದ್ದಾರೆ. ಕಂಪೆನಿಯ ಕೆಲಸಗಾರರಿಗೆ ಕಂಪೆನಿಯು ಮಾಲೀಕರು ಕೆಲವು ಸಂದರ್ಭಗಳಲ್ಲಿ ಫೈನ್ ಹಾಕುತ್ತಾರೆ. ಅವರು ಆ ರೀತಿ ಕಂಪೆನಿಯು ಕೆಲಸಗಾರರಿಗೆ ಫೈನ್ ಹಾಕಿ ವಸೂಲು ಮಾಡಿದಂತಹ ಮೊತ್ತ ಏನಿದೆ ಅದನ್ನು ಯಾವ ರೀತಿ ಏರೇ ಮಾಡಬೇಕು ಎನ್ನುವುದಕ್ಕೆ ನಾವು ಈಗ ಇದನ್ನು ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಈ ಸಭೆಯಮುಂದೆ ಮಂಡಿಸುತ್ತಾ ಬೊಂಬಾಯಿಕರ್ನಾಟಕದಲ್ಲಿರತಕ್ಕ ಫ್ಯಾಕ್ಟರಿಗಳಲ್ಲಿ ಫೈನು, ಅನ್‌ಕ್ಲೈಮ್ಡ್ ಮತ್ತು ಅನ್‌ಪೇಡ್ ವೇಜಸ್ ಸುಮಾರು 18 ಸಾವಿರ ರೂಪಾಯಿಗಳು ರಿಕವರ್ ಮಾಡತಕ್ಕದ್ದು ಇದೆ ಎಂದು ಹೇಳಿದರು. ಆದರೆ ಆ ಹಣದಲ್ಲಿ ಅನ್‌ಪೇಡ್ ಅಕ್ಯುಮಿಲೇಷನ್, ಫೈನು ಎಷ್ಟು ಎನ್ನತಕ್ಕ ವಿಚಾರವನ್ನು ಅವರು ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್—ಈಗಿರತಕ್ಕಂಥಾದ್ದು unpaid wages ಏಳು ಸಾವಿರ ಚಿಲ್ಲರೆ, ಫೈನ್ 10 ಸಾವಿರ ಚಿಲ್ಲರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಮತ್ತೆ ಹೇಳಬೇಕೆಂದರೆ, ಈಗಾಗಲೇ ಪೋಲೀಸು ಕಾನ್‌ಸ್ಟೇಬಲ್ಲುಗಳಿಗೆ ವೆಲ್‌ಫೇರ್ ಫಂಡು ಅಂತಿದೆ. ಧಾರವಾಡ ಡಿಸ್ಟ್ರಿಕ್ಟಿನಲ್ಲಿ ಕಾನ್‌ಸ್ಟೇಬಲ್ ವೆಲ್‌ಫೇರ್ ಫಂಡ್ ಅಂತಿದೆ. ಒಬ್ಬ ಕಾನ್‌ಸ್ಟೇಬಲ್ ಮರಣಕ್ಕೆ ತುತ್ತಾದಾಗ ಧನಸಹಾಯಕ ಅಥವಾ ಅವನ ಕುಟುಂಬ ಹೆರಿಗೆಯಾದಾಗ, ಮೆಟರ್ನಿಟಿ ಬೆನಿಫಿಟ್ ಒದಗಿಸಲು ಪ್ರಾರಂಭ ಮಾಡುತ್ತಿದ್ದಾರೆ. ಅದೇ ರೀತಿ ಮಾಡಬೇಕೆಂದು ನಲಹೆ ಮಾಡಬಯಸುತ್ತೇನೆ.

ಈ ಫಂಡ್ ಅಡ್ಮಿನಿಸ್ಟರ್ ಮಾಡಲಕ್ಕೆ ಒಂದು ಬೋರ್ಡ್ ಮಾಡುವ ವಿಚಾರದಲ್ಲಿ ಹೇಳುವುದಾದರೆ, the Board shall consist of members nominated by the State Government ಎಂದು ಹೇಳಿದ್ದಾರೆ. ಈ ಬೋರ್ಡು ಕಾನ್‌ಸ್ಟಿಟ್ಯೂಟ್ ಮಾಡಬೇಕಾಗಿದ್ದರೆ, ಅದಕ್ಕೆ ನಾಮಿನೇಟ್ ಮಾಡಬೇಕಾಗಿದ್ದರೆ, ಮೆಂಬರಿಗೆ ಯಾವ ರೀತಿ ಕ್ವಾಲಿಫಿಕೇಶನ್ಸ್ ಇರಬೇಕು ಅನ್ನುವ ವಿಚಾರವೇ ಇಲ್ಲ. ಸರ್ಕಾರದವರು ತಮಗೆ ಬೇಕಾದವರನ್ನು ಆರಿಸಿಕೊಳ್ಳಲಿಕ್ಕೆ ಅಧಿಕಾರ ಇಟ್ಟುಕೊಂಡಿದ್ದಾರೆ. ಇದರಲ್ಲಿ ಯಾರಾದರೂ ಹೊರಗಿನವರು ಇರುವುದಕ್ಕೂ ಶಕ್ಯವಿದೆ. ಸ್ಟೇಟ್ ಗವರ್ನ್‌ಮೆಂಟ್ ಮೆಂಬರುಗಳನ್ನು ಆರಿಸಿಕೊಂಡು ತಮಗೆ ಬೇಕಾದಂಥ ಬೋರ್ಡನ್ನು ರಚನೆ ಮಾಡಿಕೊಂಡರೆ, ಎಷ್ಟರ ಮಟ್ಟಿಗೆ ಕಾರ್ಮಿಕರಿಗೆ ಕಲ್ಯಾಣವಾಗುತ್ತದೆ. Representatives of employers and employees, ಇಬ್ಬರಿಗೂ ಸಮಾನ ಹಕ್ಕುಗಳು ಇರಬೇಕು ? ಬೋರ್ಡಿನಲ್ಲಿ ಎಂದು ಹೇಳಿದ್ದಾರೆ. Independent membersನಲ್ಲಿ, ಮಹಿಳೆಯರಿಗೆ ರೆಪ್ರೆಸೆಂಟೇಷನ್ ಕೊಟ್ಟ ಮೇಲೆ, ಕಾನ್‌ಸ್ಟಿಟ್ಯೂಶನ್ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೂ ರೆಪ್ರೆಸೆಂಟೇಷನ್ ಕೊಡಬೇಕಾಗುತ್ತದೆ. Wherever there is representation for women, there should be scheduled Caste member also. Independent members ಅಂದರೆ ಎಂ. ಎಲ್. ಎ. ಗಳು, ಎಂ. ಎಲ್. ಸಿ. ಗಳು, ಉಳಿದವರು ಯಾರು ಬೇಕಾದರೂ ಬೋರ್ಡಿಗೆ ಬರಬಹುದು. ಇದು ಪ್ರಾಮುಖ್ಯವಾಗಿ ಸ್ಟೇಟ್‌ಮೈಸ್ ಇರುತ್ತದೆ. ಇದರ ಸಲುವಾಗಿ ಕೂಡ ವಿಚಾರ ಮಾಡಿ, ಬೋರ್ಡ್ ಮಾಡಬಹುದು. The number of members of each category shall be such as may be prescribed ಅನ್ನುವಾಗ, ನೌಕರಿ ಕೊಡುವಂಥವನಿಗೂ, ನೌಕರಿ ಮಾಡುವಂಥವನಿಗೂ, ಇಬ್ಬರಿಗೂ ಸಮಾನವಾದ ಹಕ್ಕುಗಳನ್ನು ಕೊಟ್ಟಿದ್ದಾರೆ. ಇದು ಸರಿಯಿಲ್ಲ. The members of the Board shall elect one of its independent members as the Chairmen of the Board ಅಂದಿದ್ದಾರೆ. ಇದನ್ನು ಎಲ್ಲಿಯೂ ನೋಡಿಲ್ಲ. Independent memberಗಳಷ್ಟೆ ಏಕೆ ಆಗಬೇಕು. ಉಳಿದವರು ಏಕೆ ಚೇರ್ಮನ್ ಆಗಬಾರದು ? Why should not the Board elect its own Chairman, from among the representatives of employers and employees ?

ಶ್ರೀ ಡಿ. ದೇವರಾಜ ಅರಸ್.—ಅದು ಆಗುವುದಿಲ್ಲ. Labour Unions ಹ್ಯಾಂಡಲ್ ಮಾಡಿ ನೋಡಿದ್ದರೆ, ಅದರ ಅನುಭವವಿದ್ದರೆ, ತಾವು ಇದನ್ನು ಒಪ್ಪುತ್ತೀರಿ. ಲೇಬರ್ ಯೂನಿಯನ್ ಪರವಾಗಿ ಯಾಗಲೀ, ಎಂಪ್ಲಾಯರ್ ಪರವಾಗಿಯಾಗಲೀ ಚೇರ್ಮನ್ ಇದ್ದರೆ, ಅವರವರಿಗೇ ನರಿ ಹೋಗುವುದಿಲ್ಲ. ಇಂಡಿಪೆಂಡೆಂಟ್ ಮೆಂಬರ್ ಅಂತ ಇರುವುದೇ ಸಾಧುವಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಬೋರ್ಡು ಚೇರ್ಮನ್ ಯಾವ ರೀತಿ ತೆಗೆದುಕೊಳ್ಳುತ್ತೀರಿ ಅನ್ನುವುದು ಗೊತ್ತಿಲ್ಲ. The members of the Board should elect one from amongst its members, whether it is an employer or an employee or a women member a Scheduled Caste member wherever comes to the Board, as member should be eligible for election as Chairman. ಹೀಗೆ ಮಾಡಿದರೆ ನರಿ ಹೋಗುತ್ತಿತ್ತು. ಇದರಲ್ಲಿ ಮೆಂಬರ್ಸ್, ಟರ್ಮ್ ಅಂತ ಇದೆ, ನಾಮಿನೇಟ್ ಮಾಡುವುದರಿಂದ ಮೆಂಬರ್ಸ್ ಟರ್ಮ್ 4 ವರ್ಷ ಅಥವಾ 2 ವರ್ಷ ಎಂದಿರುವುದು ಒಳ್ಳೆಯದು.

Disqualification and removal of members ಎಂಬ ಕ್ಲಾಜಿನಲ್ಲಿ ವಯಸ್ಸಿನ ನಿರ್ಬಂಧ ಹಾಕಬೇಕು. ಮೆಂಬರಿಗೆ 21 ಅಥವ 18 ವರ್ಷ ಆಗಿರಬೇಕು ಅನ್ನತಕ್ಕಂಥ ಪರತ್ತನ್ನೂ ಅಳವಡಿಸಬೇಕು.

ಸೆಕ್ಷನ್ 6ರಲ್ಲಿ, A member may resign his office by giving notice there of to the State Government ಎಂದಿದೆ. ಬೋರ್ಡಿನ ಮೆಂಬರಾದಂಥವನು, ಬೋರ್ಡಿಗೆ

(ಶ್ರೀ ಸಿದ್ದಯ್ಯ ಕಾಶೀಮಠ್)

ರೆಸಿಗ್ನೇಶನ್ ಕೊಡದೆ, ಡೈರೆಕ್ಟ್‌ಗಾಗಿ ಕೊಡುವುದೆಂದರೆ ಅರ್ಥವೇನು ? ಈ ತರಹ ಯಾವ ಇತರೇ ಆಕ್ಟ್‌ಗಳಲ್ಲಿಯೂ ಇಲ್ಲ. ಕೋ-ಆಪರೇಟಿವ್ ಆಕ್ಟ್, ತಾಲ್ಲೂಕು ಬೋರ್ಡ್ ಆಕ್ಟ್, ಮುಂತಾದುವುಗಳಲ್ಲಿ ಮೆಂಬರುಗಳು ರೆಸಿಗ್ನೇಷನ್ ಪ್ರೆಸಿಡೆಂಟರಿಗೆ ಕೊಡಬೇಕು. ಇಲ್ಲಿ, ಎರ್ಲಾ ಆಕ್ಟುಗಳನ್ನೂ ಬದಿಗಿರಿಸಿ ಹೊಸ ಪದ್ಧತಿಯನ್ನು ಇಂಟ್ರಡ್ಯೂಸ್ ಮಾಡುವ ಪ್ರಮೇಯವೇನಿದೆ ? ಇದರ ಉದ್ದೇಶವೇನಿದೆ ? ಪ್ರತಿಯೊಂದು ಹಂತದಲ್ಲಿಯೂ ಸರ್ಕಾರ ಕೈಹಾಕಬೇಕೆಂದು; ಹೀಗೆ ಸರ್ಕಾರ ಕೈಹಾಕಿದರೆ ಆಡಳಿತ ಹೇಗೆ ನಡೆಯುತ್ತದೋ, ದೇವರಿಗೇ ಗೊತ್ತು. ಇನ್ನೂ ಕ್ಯಾಶುಯರ್ ವೇಕೆನ್ಸಿಯಲ್ಲ ಸರ್ಕಾರದವರು ನಾಮಿನೇಟ್ ಮಾಡುವುದಕ್ಕೆ ಅಡ್ಡಿ ಇಲ್ಲ.

Unpaid accumulations and claims ಬಗ್ಗೆ ಹೇಳುತ್ತಾ, the notice shall be inserted for a period 3 years ಅಂತ ಮಾಡಿದ್ದೀರಿ. ಈ ಅವಧಿಯನ್ನು 4 ವರ್ಷ ಅಂತ ಇಟ್ಟುಕೊಳ್ಳಬಹುದು. ಈ ನೋಟೀಸನ್ನು, ಜೂನ್ ಮತ್ತು ಡಿಸೆಂಬರ್ ತಿಂಗಳಲ್ಲಿ ಇನ್‌ಸರ್ಟ್ ಮಾಡಬೇಕೆಂದು ರಿಸ್ಟ್ರಿಕ್ಷನ್ ಹಾಕಿದ್ದೀರಿ, ಇದು ಹೀಗಿರಬಾರದು. ತಮಗೆ ಬಂದ ತಕ್ಷಣ ನೋಟೀಸು ಕೊಟ್ಟು ಕರೆದು ಮಾಡುವುದು ಒಳ್ಳೆಯದು. Why not in March and April ? ಕಟ್ಟುನಿಟ್ಟಾಗಿ ಜೂನ್ ಮತ್ತು ಡಿಸೆಂಬರ್ ಅಂದರೆ ಸಮಂಜಸ ಕಾಣುವುದಿಲ್ಲ. ಈ ರೀತಿ ಮಾಡುವುದು ಯೋಗ್ಯವಲ್ಲ.

If a claim is received within a period of four years, the Board will transfer the claim to the Authority. ಇದು ಆದನಂತರ ತಾವು ಹಣವನ್ನು ಯಾವ ಉದ್ದೇಶಕ್ಕೆ ಉಪಯೋಗ ಮಾಡುತ್ತೀರ ಅಂದರೆ, the moneys in the Fund may be utilised by the Board to defray expenditure on Community and Social Education Centres, games and sports, excursions, tours and holiday homes, ಇತ್ಯಾದಿಯಾಗಿ 8–9 ಉದ್ದೇಶಗಳಿಗಾಗಿ ಇದನ್ನು ಎಂಪ್ಲಾಯೀಸ್ ಎಜುಕೇಶನ್ ಬಗ್ಗೆಯೂ ಉಪಯೋಗಿಸಬೇಕು ; ಸ್ವಲ್ಪ ಪ್ರೈಮರಿ ಸ್ಕೂಲುಗಳನ್ನು ನಡೆಸಿದರೆ ಮತ್ತು ಅಡಲ್ಟ್ ಎಜುಕೇಶನ್ ಸ್ಕೂಲುಗಳನ್ನು ತೆರೆದರೆ, ಯಾವುದಾದರೂ ಒಂದು ರೀತಿಯಿಂದ ಅವರು ಮುಂದೆ ಬರುತ್ತಾರೆ. ಯಾವಾಗಲೂ ಕೂಲಿಗಾರರು ಕೂಲಿಗಾರರಾಗಿಯೇ ಇರಬೇಕೋ ? Why not they establish schools ?

ಸೆಕ್ಷನ್ 12ರಲ್ಲಿ Appointment and Powers of Welfare Commissioner ಬಗ್ಗೆ ಹೇಳುತ್ತೀರಿ. ಈಗಾಗಲೇ ಇರುವ ಲೇಬರ್ ಕಮಿಷನರ್ ಮತ್ತು ಅವರ ಸ್ಟಾಫ್ ಏನು ಇದೆಯೋ ಅವರನ್ನು ಏನು ಮಾಡುತ್ತೀರಿ ಅನ್ನುವುದನ್ನು ತಾವು ಹೇಳಲಿಲ್ಲ. ಈ ವೆಲ್‌ಫೇರ್ ಕಮಿಷನರ, ಎಕ್ಸಿಕ್ಯೂಟೀವ್ ಆಫೀಸರ್ ಅನ್ನುವುದನ್ನು ಒಪ್ಪಿಕೊಳ್ಳುತ್ತೇನೆ. The State Government may appoint Inspectors ಅಂತ ಸೆಕ್ಷನ್ 13ರಲ್ಲಿ ಹೇಳುತ್ತೀರಿ. ಸೆಕ್ಷನ್ 12ರಲ್ಲಿ The Welfare Commissioner shall be appointed by the Board ಅಂತ ಹೇಳುತ್ತೀರಿ. ಇನ್‌ಸ್ಪೆಕ್ಟರುಗಳನ್ನು ಸರ್ಕಾರ ನೇಮಿಸುವುದೆಂದರೆ, ವೆಲ್‌ಫೇರ್ ಕಮಿಷನರಿಗಿಂತ ಇನ್‌ಸ್ಪೆಕ್ಟರಿಗೆ ಹೆಚ್ಚಿನ ಗೌರವ ಕೊಟ್ಟಂತಾಯಿತು. ಇದರಿಂದ ಎಷ್ಟರ ಮಟ್ಟಿಗೆ ಕಮೀಷನರಿಗೆ ಮಹತ್ವ ಕೊಡುತ್ತೀರಿ ಎಂದು ಅರ್ಥವಾಗುತ್ತದೆ. ಈಗ ಇದ್ದಂಥ ಕಮಿಷನರೇ ಇದ್ದು, ಬೋರ್ಡಿಗೆ ಒಬ್ಬ ಸೆಕ್ರೆಟರಿ, ಕೆಲವು ಕ್ಲಾರ್ಕುಗಳನ್ನು ಇಟ್ಟುಕೊಂಡರೆ ಸಾಕು. ಹಣ ಇಲ್ಲ, ರೊಕ್ಕ ಇಲ್ಲ ಎಂದು ಮೇಲಿಂದಮೇಲೆ ಹೇಳುತ್ತಿರುತ್ತೀರಿ. ಈ ಫೈನಾನ್ಷಿಯಲ್ ಸ್ಟ್ರಿಂಜೆನ್ಸಿ ಕಾಲದಲ್ಲಿ 1 ಲಕ್ಷ ರೂಪಾಯಿಯನ್ನು ಈ ಮನೂದೆ ಕಾರ್ಯಗತ ಮಾಡಲು ಹೆಚ್ಚಿಗೆ ಖರ್ಚು ಮಾಡುತ್ತೇವೆಂದರೆ ಏನೂ ಅರ್ಥವಿಲ್ಲ. ಈ ಬಿಲ್ಲಿನ ಸೆಕ್ಷನ್ನು 14ರಲ್ಲಿ ಹೇಳಿರುವಂತೆ ಬೋರ್ಡಿನವರು ಅವರಿಗೆ ಬೇಕಾಗುವ ಕ್ಲೆರಿಕಲ್ ಸ್ಟಾಫ್ ಇತ್ಯಾದಿಗಳನ್ನು ನೇಮಕ ಮಾಡಬೇಕೆಂದು ಇದೆ. ಇವರನ್ನೆಲ್ಲ ಏತಕ್ಕಾಗಿ ಮಾಡಬೇಕು ಎಂದು ನಾನು ಕೇಳುತ್ತಲಿದ್ದೇನೆ. ಕಮಿಷನರು ಹಾಗೂ ಇನ್ಸ್‌ಪೆಕ್ಟರುಗಳು ಎಂದಿರುವಾಗ ಇವರುಗಳೆಲ್ಲಾ ಏತಕ್ಕಾಗಿ ಎನ್ನುವುದು ತಿಳಿಯದ ಪ್ರಶ್ನೆಯಾಗಿದೆ.

4-00 P.M.

ಮುಂದೆ ಸೆಕ್ಷನ್ನು 15ರಲ್ಲಿ ಈ ರೀತಿ ಇದೆ :

"The State Government shall have the power to remove any person whom it may deem unsuitable from service of the Board." .....

ಇಂತಹ ಅಧಿಕಾರಗಳನ್ನು ಕೊಟ್ಟು ಕೆಲಸ ಮಾಡುವಾಗ ಜ್ಯೋರ್ಡಿನಪರ ಇಂಮ್ಯು ರೆನರ್ಯೂಷನ್ನು ಬೇಡವೇ ? ಇಂತಹ ಅಧಿಕಾರಗಳನ್ನೆಲ್ಲಾ ಇಲ್ಲಿ ಕೊಟ್ಟರೆ ಅಡ್ಮಿನಿಸ್ಟ್ರೇಷನ್ನು ಯಾವ ರೀತಿ ಚೆನ್ನಾಗಿ ನಡೆಯುವುದು ? ಅದು ತಿಳಿಯದಾಗಿದೆ ಪ್ರಶ್ನೆಯಾಗಿದೆ. ಇಂತಹ ಬಿಲ್ಲುಗಳನ್ನು ತರುವಾಗ ಸರಿಯಾದ ಪದೋಪದಗಳನ್ನು ಇದರೂ ಸರಿಪಡಿಸಿ, ಈ ಬಿಲ್ಲನ್ನು ಮಂದಿನ ಕೆಷ್ಟನ್ಸ್‌ವ್ಯಾಲಿದರೂ ತಂಬಾ ದಾಗಿತ್ತು ಎಂದು ಈ ಸಿಮಾಯಿಡ್ಲಲ್ಲಿ ಹೆಳಬೇಕಾಗಿದೆ. ಅಯರ್‌ನ್ಸ್‌ನ್ನು ವ್ಯವಸ್ಥೂಲು ಮಾಡುವಾಗ ಲ್ಯಾಂಡು ರೆವೆನ್ಯೂ ವಸೂಲು ಮಾಡುವಂತೆ ವಸೂಲು ಮಾಡುತ್ತಾರೆ ಎಂದು ಇದರಲ್ಲಿ ಹೇಳಿದ್ದಾರೆ. ಈಗಾಗಲೇ ತಹಶೀಲುದಾರುಗಳಿಗೆ ಇರುವ ಕೆಲಸವನ್ನೇ ಸಾಲದು ಅಗುತ್ತಲ್ಲ. ಇಂತಹ ಒಂದು ಕಮಿಷನ್ನು ಎಂದು ಮಾಡುವುದಕ್ಕೆ ಬದಲಾಗಿ ಒಬ್ಬರು ಸಕ್ರೆಟರಿಗೆ ಎಂದು ಈ ಜ್ಯೋರ್ಡಿಗೆ ನೇಮಕ ಮಾಡಿ ಅವರ ಕೈಕೆಳಗೆ ಒಬ್ಬರೋ ಇಬ್ಬರೋ ಕಾರಕೂನರುಗಳನ್ನು ಇಟ್ಟುಕೊಂಡು ಇಲ್ಲಿಯ ಕೆಲಸ ಕಾರ್ಯಗಳನ್ನು ನಡೆಸಲು ಸರಿಹೋಗಬಹುದು ಎಂದು ನನಗನ್ನಿಸುತ್ತದೆ.

ಇನ್ನು ರೂಲ್ಸು ಪ್ರಕಾರ ಮಾಡುವಾಗ ಚೇರ್ಮನ್ನರುಗಳಿಗೆ ಏನಾದರೂ ಅಧಿಕಾರಗಳನ್ನು ಕೊಟ್ಟಿದ್ದಾರೆಯೇ ಎಂದರೆ ಏನೂ ಇಲ್ಲ ಏನ್ನುವುದು ಇದರಲ್ಲಿ ಕಂಡುಬರುತ್ತದೆ. ಇದರಲ್ಲಿ 19 (g) ನಲ್ಲಿ,

"(g) the duties and powers of the Inspectors and the conditions of service of the Welfare Commissioner and Inspectors and other staff appointed under this Act;"

ಎಂದಿದೆ. ಎಂದರೆ ಜ್ಯೋರ್ಡಿನ ಚೇರ್ಮನ್ನಾಗಿರುವವರಿಗೆ ಏನೇನೂ ಅಧಿಕಾರಗಳನ್ನು ಕೊಟ್ಟಿಲ್ಲ. ಹೀಗೆ ಚೇರ್ಮನ್ನರಿಗೇ ಏನೂ ಅಧಿಕಾರಗಳನ್ನು ಕೊಡದೇ ಹೋದರೆ ಇದರ ಸ್ಯಾಂಕ್ಷನೆಯೆಂದೂ ಏನು ಉಳಿಯುತ್ತದೆ ಎಂದು ನಾನು ಇಲ್ಲಿ ಕೇಳಬಯಸುತ್ತೇನೆ. ಒಟ್ಟಿನಲ್ಲಿ ನಾನು ಸರ್ಕಾರಕ್ಕೆ ಸೂಚನೆ ಮಾಡುವುದು ನಾವು ಬಹಳ ಪ್ರಾಮುಖ್ಯವಾಗಿ ಕಾರ್ಮಿಕರಿಗೆ ಏನುಕೊಡಬೇಕೆಂಬ ಮತ್ತು ಅವರ ಅಭಿವೃದ್ಧಿಯಾಗಬೇಕು ಎಂದು ಹೇಳುತ್ತಿರುವಾಗ ಅದಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಸರಿಯಾದ ರೀತಿಯಲ್ಲಿ ಮಾಡುವುದು ಅತ್ಯವಶ್ಯಕ ಎಂದು ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Sri SANJEEVANTH AIKALA.—Mr. Speaker, Sir, this Bill seeks to provide certain welfare facilities to the workers as mentioned in Clause 8, by the money got from various sources as mentioned in Clause 3 to be spent by a Board as mentioned in Clause 4. However restricted in scope it may be, I welcome the spirit of the Bill. This Government, which is not capable of providing certain facilities to its own employees and which refuses to meet the legitimate demands of its 1,60,000 employees, is now gracious enough to provide a Bill which seeks to bring some welfare measures or implement certain welfare schemes through the appointment of a Board and funds got from sources other than Government's contribution or subsidy. I went through the clauses and sub-section of Clause 3 and found nowhere it has been mentioned that the...

Sri D. DEVARAJ URS.—You had at any time the chance of going through the Bomby Act!

Sri SANJEEVANATH AIKALA.—No, Sir.

Sri D. DEVARAJ URS.—If you want, I will read it to you.

Sri SANJEEVANATH AIKALA.—The Labour Minister assures that their contribution is also there, and if it were so, I welcome it. In Clause 3 as regards the sources.....

Sri D. DEVARAJ URS.—You will kindly see sub-section (e) of Clause 3, which says :

"(e) any sum borrowed under Section 9" and Section 9 says.

"POWER OF BOARD TO BORROW.—the Board may from time to time with the previous sanction of the State Government and subject to the provisions of this Act and to such conditions as may be specified in this behalf borrow any sum required for the purposes of this Act."

Sri SANJEEVANATH AIKALA.—It may borrow from the Banks and Societies, but not from the Government. If it were the intention of the Government that it can borrow from Government, it ought to have been clearly mentioned.

Regarding the appointment of the Board, Hon'ble Member, Sri Siddaiah Kashimath has already stated the implications of this. We have very bitter experience about these Boards, Committees Corporation and other Statutory Boards appointed by the Government. Immediately after elections, when a Member of the previous Assembly is defeated, he will be provided with a place on these bodies and any defeated Minister will be appointed the Chairman of the Board. I believe, the intention underlying this clause is similar to that. Otherwise, there would have been no necessity for nominating members to the Board. This could have been done by the elections. There are Works Committees and Standing Committees in every Factory and Unions. So, the election could have been done and some representatives could have been appointed to these Boards.

Sri D. DEVARAJ URS.—Election from which Electoral College!

Sri SANJEEVANATH AIKALA.—From all the Unions of Industries; it may be industrywise or districtwise.

Sri D. DEVARAJ URS.—Let us hear the Labour Representative about it.

Sri SANJEEVANATH AIKALA.—However, my considered opinion is, it could have been districtwise and that way the Board could have been constituted. Further, on all the Committees constituted by the Government, on behalf of the workers, I find that there is a sort of favouritism shown to the representatives of the Indian Trade Union Congress which is running under the auspices of Congresss Organisation.

Sri D. DEVARAJ URS.—I wish to clear the apprehension just now expressed by my hon'ble friend. I for one would still maintain that even if we show some concession to the I.N.T.U.C., there is nothing wrong. The Mysore Government have adopted a policy, and we have been considering the H. M. S., I. N. T U. C., and the A.I.T.U.C., almost on an equal footing.

Sri SANJEEVANATH AIKALA.—In the implementation I hope Sri S. Rajagopal would agree with me favouritism would be shown

towards the I. N. T. U, even though there are no members from that organisation. I fear that the same kind of thing will be done here also.

Regarding the appointment of the Welfare Commissioner, I don't see why the petty post of Welfare Commissioner should be created at all.

Sri D. DEVARAJ URS.—It is an executive office.

Sri SANJEEVANATH AIKALA.—I do not want the Welfare Commissioner. He should be easily represented by appointeing a Secretary, who could do this work, or any officer of the Labour Department could be entrusted with this work of the Welfare Commissioner. There is no necessity for appointing a Welfare Commissioner, which alone takes away a major portion of the fund by way of salary, T. A., etc. I can give you an example of the Fisheries Advisory Board, wherein the Director of the Fisheries Department is the Secretary of the Board. Similarly, one of the officers of the Labour Department, viz., the Labour Commissioner or Assistant Commissioner, be in charge of this as the Secretary. Therefore, there is absolutley no necessity for oppointing a Welfare Commissioner, whose salary and other establishment expenses will take away a major portion of the welfare fund.

Regarding the scope of the varioues welfare activities also, I sent some amendments and I will deal with them when those amendments are moved. These are the only few observations I wish to make.

†ಶ್ರೀ ಸಿ. ಜೆ. ಮುಕಣ್ಣಪ್ಪ.—ಅಧ್ಯಕ್ಷರೆ, ಈ ಕಾರ್ಮಿಕ ನಿಧಿಯು ನಮ್ಮ ಕೈಯ್ಯಲ್ಲಿ ಒಂದು ನಿರ್ಗಂಧ ಕುಸುಮವನ್ನು ಕೊಟ್ಟಿದಾರೆ. ನೋಡುವುದಕ್ಕೆ ಇದು ಬಹಳ ಸುಂದರವಾಗಿದೆ, ಆದರೆ ಇದರಲ್ಲಿ ಏನು ವಾಸನೆಯೂ ಇಲ್ಲ. ನೋಡುವುದಕ್ಕೆ ಅಲಂಕಾರವಾಗಿದೆ. ಲೇಬರ್ ವೆಲ್‌ಫೇರ್ ಫಂಡ್ ಮಾಡಿದ್ದೇವೆಂದು ಹೇಳಿದರು, ಇದರಿಂದ ಗೂಟವಿಲ್ಲದಿರುವವನಿಗೆ ಗೂಟ ಸಿಕ್ಕಿದಹಾಗೆ, ತಲೆಗೆ ಎಣ್ಣೆ ಇಲ್ಲದಿರುವವನಿಗೆ ಹಚ್ಚಿಕೊಳ್ಳಲು ಎಣ್ಣೆ ಸಿಕ್ಕಿದಂತಾಯಿತೆ? ಎಣ್ಣೆ ಹಚ್ಚಿಕೊಂಡಂತಾಯಿತೆ? ಇದರಲ್ಲಿ ನಮಗೆ ಉಪಯೋಗವಿದೆ? ಈ ಫಂಡಿನ ರಚನೆ, ಅದಿಕಾರಿಗಳು ಮತ್ತು ಅವರ ಅಧಿಕಾರಗಳು ಹೀಗೆ ಏನೇನೋ ಇದರಲ್ಲಿ ಸೇರಿಸಿವ್ವಾರೆ. ಈ ಎಲ್ಲ ಸಾಲೆಯು ಕೊನೆಯಲ್ಲಿ ಒಂದು ಕ್ಲಾಜ್ನಿಟ್ಟಿದ್ದಾರೆ. ಸರಕಾರದವರಿಗೆ, ಬೇಕಾದವರಿಗೆ, ಅವರ ಹೆಂಡತಿ ನಂಗೆ ಏನಾಯಿತಿ ಕೊಡುವುದಕ್ಕೆ 22ನೆಯ ಕ್ಲಾಜ್ ನಲ್ಲಿ ಅವಕಾಶ ಮಾಡಿಕೊಂಡಿದಾರೆ. ಇದರಲ್ಲಿ ಬಹು ಮುಖ್ಯವಾದುದು ಫಂಡು. ಬೋರ್ಡಿನ ವಿಚಾರವಿದೆ. ಈ ದಿವಸ ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಸರಕಾರ ಕೈಕೊಂಡ ಕಾರ್ಯಕ್ರಮಗಳೇನು? ಅವರ ಕ್ಷೇಮಾಭ್ಯುದಯಕ್ಕಾಗಿ ಈ ಸರಕಾರ ಮತ್ತು ಕೇಂದ್ರಸರಕಾರ ಇಟ್ಟುಕೊಂಡಿರುವ ಒಂದೆರಡು ಅಂಶಗಳನ್ನಾದರೂ ಇದರಲ್ಲಿ ಅಡಕ ಮಾಡಿ, ನಾವು ಇಷ್ಟು ಹಣವನ್ನು ಬೋರ್ಡಿಗೆ ಕೊಡುತ್ತೇವೆ, ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಅವರ ಗೃಹಕೃತ್ಯಕ್ಕಾಗಿ, ಅವರ ಅಭ್ಯುದಯಕ್ಕಾಗಿ ಇಷ್ಟಿಷ್ಟು ಕೊಡುತ್ತೇವೆ ಎಂಬ ಬಗ್ಗೆ ಇದರಲ್ಲಿ ಎಲ್ಲಾದರೂ ಒಂದು ಪದವಾದರೂ ಇದ್ದಿದ್ದರೆ ಒಪ್ಪಿಕೊಳ್ಳುತ್ತಿದ್ದೆವು. ಅದೇನೂ ಇಲ್ಲದೆ ಬೊಂಬಾಯಿನ ಕಾನೂನಿನ ರೀತಿ ಮಾಡಿದ್ದೇವೆ ಎಂದು ಹೇಳಿದರು. ಹೋಗಲಿ, ಅದಕ್ಕಿಂತ ಏನಾದೂ ಉತ್ತಮವಾಗಿ ಮಾಡಿದ್ದಾರೆಯೆ, ಅದೂ ಇಲ್ಲ. ಈ ಮಸೂದೆಯ ಧ್ಯೇಯ ಮತ್ತು ಕಾರಣಗಳಲ್ಲಿ ಅಲ್ಲಿ ಒಂದು ಮಸೂದೆ ತಂದರು, ಹಾಗೆಯೇ ಇಲ್ಲಿಯೂ ತಂದಿದ್ದೇವೆಂದು ಹೇಳಿದಾರೆ. ಮಾಲೀಕರ ಮತ್ತು ಕಾರ್ಮಿಕರ ಮಧ್ಯೆ ಯಾವುದಾದರೂ ವಿವಾದ ಬಂದರೆ ಸರಕಾರ ಮಾಲೀಕರ ಪರ. ಇಲ್ಲಿ ಮಾತ್ರ ಕಾರ್ಮಿಕರ ಹಿತದ ವಿಷಯ ಮಾತನಾಡುವುದು. ಬೋರ್ಡಿನ ಸದಸ್ಯರಲ್ಲಿ ಮಾಲೀಕರು ಮತ್ತು ಕಾರ್ಮಿಕರ ಪ್ರಾತಿನಿಧ್ಯ ಸಮಪಾಗಿರಬೇಕೆಂದಿದೆ. ಬೋರ್ಡಿನ ಚೇರ್ಮನ್ ಸದಸ್ಯರಿಂದ ಚುನಾಯಿತನಾದವನಾಗಿರಬೇಕು, ಅವನು ಮಾಲೀಕರ ಪ್ರತಿನಿಧಿಯೂ ಆಗಿರಬಾರದು, ಕಾರ್ಮಿಕರ ಪ್ರತಿನಿಧಿಯೂ ಆಗಿರಬಾರದು, ಸ್ವತಂತ್ರನಾಗಿರಬೇಕೆಂದಿದೆ. ಮಾಲೀಕರು ಅಥವಾ ಕಾರ್ಮಿಕರ ವೈಕಿ ಚೇರ್ಮನ್ ಆದರೆ ಅವರಿಗೆ ಸಮ್ಮತ ತಪ್ಪುವಲ್ಲಿ ಅನಕ್ಕೆ ಇರುತ್ತದೆ. ತಪ್ಪು ಕೇನನ್ನು ಬಂಪಡಿಸುವುದಕ್ಕೆ ಪ್ರಮುಖ ಪದಾತ್ಮನೆ, ಅದಾವಾಗ ಯಾವೊಬ್ಬರ ಕಡೆಯೂ ಅನಕ್ಕೆ ಇಲ್ಲದೇಯಿರುವವನು ಚೇರ್ಮನ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಆಗಿರಬೇಕೆಂದು ಇರಬಹುದನ್ನು ಅರ್ಥ ಮಾಡಿಕೊಳ್ಳಬಲ್ಲೆ. ಈ ಬೋರ್ಡ್ ಏನೇನು ಕೆಲಸ ಮಾಡುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ಒಂದು ದೊಡ್ಡ ಪಟ್ಟಿಯನ್ನೇನೋ ಕೊಟ್ಟಿದ್ದಾರೆ 8ನೆಯ ಕ್ಲಾಜಿನಲ್ಲಿ; ಈ ಹಣವನ್ನು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಬಹುದೆಂದು ತಿಳಿಸಿದ್ದಾರೆ. ಇದನ್ನು ನೋಡಿದರೆ ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಎನ್ನುವಹಾಗಾದೆ ಜ್ಞಾಪಕಕ್ಕೆ ಬರುತ್ತದೆ. ಇದರಲ್ಲಿ ಎಂಟರ್‌ಟೇನ್‌ಮೆಂಟ್, ಎಕ್ಸ್‌ಕರ್ಷನ್ಸ್ ಟೂರ್ಸ್ ಮತ್ತು ಹಾಲಿಡೇ ಹೋಮ್ಸ್ ಎಂದು ನಮೂದು ಮಾಡಿದ್ದಾರೆ, ಒಂದು ಕಿರೋ ಬೇಳೆಗೆ ಎರಡೂಕಾಲು ರೂಪಾಯಿ ಆಗಿರುವಾಗ ಇದನ್ನು ಕೊಂಡು ತಿನ್ನುವ ಕಾರ್ಮಿಕ, ಪ್ರವಾಸಗಳು, ಹನಿಮೂನ್ ಇಂಥವುಗಳಿಗೆ ಡಾರ್ಜಿಲಿಂಗ್ ಮುಂತಾದ ಸ್ಥಳಗಳಿಗೆ ಹೋಗುತ್ತಾನೆಯೆ ? ಮಂತ್ರಿಗಳು ಎಷ್ಟು ಭೂಷಣವಾಗಿದ್ದಾರೆಯೋ ಅದಕ್ಕೆ ತಕ್ಕಹಾಗೆ ಕಾನೂನು ಮಾಡಬೇಕು. ಆದರೆ ಇದರಲ್ಲಿ ಕೊಡುವುದು ಒಂದು ಕಾನು ಕೋಣಿತುಂಬ ಹಾಸು ಎನ್ನುವಂತಿದೆ. ಇದರ ಉದ್ದೇಶಗಳನ್ನು ವಿವರಿಸುವಾಗ ಮೈಸೂರು ರಾಜ್ಯದ ಕಾರ್ಮಿಕರ ಹಿತರಕ್ಷಣೆಗಾಗಿ ಇದನ್ನು ಮಾಡಿದ್ದೇವೆ, ಈ ಬೋರ್ಡಿನ ರಚನೆಯಾಗಿದೆ, ಇದರಿಂದ ಕಾರ್ಮಿಕರ ಅಭ್ಯುದಯವಾಗುತ್ತದೆ ಎಂದು ಹೇಳಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಬೊಂಬಾಯಿನ ಕಾನೂನನ್ನು ನಮ್ಮ ಸರಕಾರದವರು ಕಾಪಿ ಮಾಡಿ ಇಲ್ಲಿ ತರಲೇಬಿದ್ದಿದರೆ ಅವರನ್ನು ನಾವೇನೂ ನಿಷ್ಠುರ ಮಾಡುತ್ತಿರಲಿಲ್ಲ. ಈಗಾಗಲೆ ಕಾರ್ಮಿಕ ಕಾನೂನನ್ನೇ ನಮ್ಮಲ್ಲಿ ಕಾರ್ಯಗತ ಮಾಡುವುದಕ್ಕೆ ಇವರು ಶಕ್ತರಾಗಿರುವಾಗ, ಇದರಂತೆ ಕಾರ್ಮಿಕರಿಗೆ ಸರಿಯಾದ ಸೌಲಭ್ಯಗಳನ್ನೊದಗಿಸದಿರುವಾಗ, ಈ ಕಾನೂನನ್ನು ತಂದಿರುವುದು ನನಗೆ ಅರ್ಥವಾಗುವುದಿಲ್ಲ.

ಸ್ವಾಮಿ, ಇನ್ನೊಂದು ವಿಷಯವನ್ನು ಹೇಳುತ್ತೇನೆ. ಸ್ವಲ್ಪ ಕಠಿಣವಾದ ಪದವನ್ನು ಪ್ರಯೋಗಿಸುತ್ತೇನೆ. ಇದು ಲಗಾಡಿಶಬ್ದಕ್ಕೆ ವಿವರಣೆಯಾಗಿದೆ. ಬೋರ್ಡ್ ಬರುತ್ತದೆ, ಫಂಡ್ ಆಗುತ್ತದೆ, ಇದರಲ್ಲಿ ಇದು ಮಾಡುತ್ತೇವೆ, ಅದು ಮಾಡುತ್ತೇವೆ ಎಂದು ಸರಕಾರ ಹೇಳುತ್ತಾರೆ. ಇದು ಹುಣಸೇ ಬತ್ತದ ಕತೆಯಂತಿದೆ. ತಿರುಕನ ಕನಸಿನಂತೆ. ಸಿಕ್ಕಿದ ಹುಣಿಸೆ ಬತ್ತವನ್ನು ನೆಟ್ಟರೆ ಅದು ಮರವಾಗಿ ಅದರ ಹಣ್ಣನ್ನು ಮಾರಿ, ಆ ಹಣದಲ್ಲಿ ಮನೆಕೊಂಡು, ಮದುವೆ ಮಾಡಿಕೊಂಡು ನಂತರ ಮಗುವಿನ ನಾಮಕರಣ ಮಾಡಿ, ಆ ಸಂದರ್ಭದಲ್ಲಿ ಹೆಂಡತಿ ಕಾನು ಹೇಳಿದುದನ್ನು ಕೇಳದಿದ್ದರೆ ಅವಳನ್ನು ಹೀಗೆ ಒದೆಯುತ್ತೇನೆ ಎಂದು ಅವನು ಮಾತಿ, ತನ್ನಲ್ಲಿದ್ದ ಹಿಟ್ಟನ್ನೂ ಚೆಲ್ಲಿ ಕೊಂಡ ಹಾಗಾಗಬಾರದು ಎಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾರ್ಮಿಕರ ವಿಷಯವನ್ನೆಲ್ಲ ಹೇಳಬೇಕಾದರೆ ಒಂದೆರಡು ಗಂಟೆಗಳು ಆಗುವಾ ಕೆಲವು ನಿಮಿಷಗಳಲ್ಲಿ ಆಗುವುದಿಲ್ಲ. ಒಂದೇ ಮಾತಿನಲ್ಲಿ ಹೇಳುವದಾದರೆ, ಎಲ್ಲ ಕಾರ್ಮಿಕರ ಹಿತರಕ್ಷಣೆ ಮಾಡುವುದಕ್ಕೆ ಸರಕಾರ ಮಾತ್ರ, ಸಮಾಜ ವಿಫಲವಾಗಿರುತ್ತದೆಯೋ ಆ ರಾಜ್ಯಕ್ಕೆ ಕಲ್ಯಾಣವಾಗುವುದಿಲ್ಲ. ಎಲ್ಲಿಯವರೆಗೆ ಅವನನ್ನು ಸುಖವಾಗಿಟ್ಟಿರುವುದಿಲ್ಲ. ಅವರ ಕ್ಷೇಮವನ್ನು ನೋಡುವುದಿಲ್ಲ ಅಲ್ಲಿಯವರೆಗೆ ಆ ರಾಜ್ಯಕ್ಕೆ ಕಲ್ಯಾಣವಾಗುವುದಿಲ್ಲ. ಈ ಕಾನೂನಿನಿಂದ ಕಾರ್ಮಿಕರಿಗೇನೂ ಸಹಾಯವಾಗುವುದಿಲ್ಲ. ಸರಕಾರ ಈ ಫಂಡಿಗೆ ಎಷ್ಟು ಹಣ ಕೊಡುತ್ತಾರೆಂಬುದನ್ನು ಹೇಳಿಲ್ಲ ಡೊನೇಷನ್ ಮೂಲಕ ಬಂದೆ ಹಣ ಎಂದು ಹೇಳಿದ್ದಾರೆ, ಇದಕ್ಕೆ ಯಾರು ದಾನ ಕೊಡುತ್ತಾರೆ? ಸರಕಾರದವರು ಕೊಡುತ್ತಾರೆಯೆ, ಬೇರೆಯವರು ಅಪ್ರತ್ಯಕ್ಷವಾಗಿ ಕೊಡುತಾರೆಯೆ ? ಮಾಲೀಕ ಕೊಡುತ್ತಾನೆಯೆ ?

ಶ್ರೀ ಡಿ. ದೇವರಾಜ ಅರಸ್.—ತಮ್ಮಂತಹ ಮಹನೀಯರು ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂತಹ ಮಂತ್ರಿಗಳು ಅಧಿಕಾರಕ್ಕೆ ಬಂದು ಹದಿನೆಂಟು ವರ್ಷವಾದರೂ ಒಂದು ಕಾನೂ ಇಲ್ಲದಿರುವಾಗ ಇವರು ನಮ್ಮನ್ನು ಆಕರ್ಷಿಸುತ್ತಿದಾರೆ. ಕಾರ್ಮಿಕರನ್ನು ಕೆಣಕುತ್ತಿದ್ದಾರೆ; ಅವರ ಯೋಗ್ಯತೆಯನ್ನು ಪರೀಕ್ಷೆಮಾಡುತ್ತಿದ್ದಾರೆ. ಡೋನೇಷನ್ ಯಾರು ಕೊಡುತ್ತಾರೆ? ಯಾವ ಪಕ್ಷ, ಯಾವ ಶ್ರೀಮಂತರು, ಯಾವ ಅರಸರು ಕೊಡುತಾರೆ? ಬೋರ್ಡ್ ಸಾಲ ಮಾಡುವುದಕ್ಕೆ ಸರಕಾರ ಮುಂಜೂರಾತಿ ಕೊಡುತಾರಂತೆ, ಫಂಡ್ ಮಾಡುತ್ತಾರಂತೆ. ಇದನ್ನು ನಂಬಬಹುದೆ? ಬೊಂಬಾಯಿ ಸರಕಾರ ಅಥವಾ ಬೇರೆ ಯಾವದಾದರೂ ಸರಕಾರದಲ್ಲಿ ಇವರ್ಯಾಗಿ ಸಾಲ ಮಾಡಿದ್ದಾರೆಯೆ, ಮಾಡಿದರೆ ಎಷ್ಟು ಸಾಲ ಮಾಡಿದ್ದಾರೆ ಎಷ್ಟು ಕೆಲಸ ಅಲ್ಲಿನ ಬೋರ್ಡಿನವರು ಮಾಡಿದಾರೆ ಎನ್ನುವುದನ್ನು ಕೂಡ ತಿಳಿಸಿಲ್ಲ. ದೇಶದಲ್ಲಿ ಜನರಿಗೆ ಮೋಟಾರು, ಪಂಚೆ, ವಿಮಾನ ಅರಮನೆ ಇವುಗಳ ಆಸೆಗಳನ್ನೆಲ್ಲಾ ಕೆರಳಿಸಿ, ನಂತರ ಏನೂ ಇಲ್ಲದಂತೆ ಮಾಡಿ ಅವರನ್ನು ನಿರಾಶರಾಗಿ ಮಾಡಬಾರದು. ಹಾಗೆ ಅವರಲ್ಲಿ ನಿರಾಶೆಯನ್ನುಂಟು ಮಾಡಿದರೆ ಸರಕಾರಕ್ಕೆ ಕೊಂದರೆಯಾಗುತ್ತದೆ.

ವೆಲ್‌ಫೇರ್ ಕಮಿಷನರನ್ನು ನೇಮಕ ಮಾಡುವುದು ಬೋರ್ಡು, ಆದರೆ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡುವವರು ಸರಕಾರ. ಇದು ಅಷ್ಟಿನಿಂತ ಮಗ ದೊಡ್ಡವನ್ನು ಎನ್ನುವ ಹಾಗಿದೆ. ಬೋರ್ಡು ನೇಮಕ ಮಾಡಿದ ಕಮಿಷನರ್ ಲೆಕ್ಕಪತ್ರವ್ಯವಹಾರಗಳನ್ನು ಇನ್‌ಸ್ಪೆಕ್ಟರ್‌ಗಳನ್ನು ಇಟ್ಟುಕೊಂಡು ತನಿಖೆ ಮಾಡುವುದೆಂದರೇನು ? 13ನೇ ಕ್ಲಾಜಿನಲ್ಲಿ ಈ ರೀತಿ ಇರುವುದನ್ನು ನೋಡಿದರೆ ಲೆಕ್ಕಪತ್ರ ಆಡಿಟ್ ಮಾಡಲು ಆಡಿಟರ್ ಬೇಕಾದರೆ ಇರಲಿ. ಇನ್‌ಸ್ಪೆಕ್ಟರ್‌ಗಳನ್ನು ಹಾಕಿದರೆ ಅವರು ಏನು ಮಾಡುತ್ತಾರೆ ! ಎಂದರೆ ಇದರ ಅರ್ಥ ಏನು ?

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಲೇಬರ್ ವೆಲ್‌ಫೇರ್ ಕಮಿಷನರ್ ಅವರ ಅಧೀನದಲ್ಲಿ ನಮ್ಮ ವೈಸೂರು ನಗರವನ್ನು ಸೇರಿಸಿ 16 ಸೆಂಟರ್‌ಗಳಿವೆ. ಇದನ್ನು ಸರಕಾರ ನೇರವಾಗಿ ನಡೆಸುತ್ತಿದ್ದಾರೆ. ದುಡ್ಡು ಖರ್ಚು ಮಾಡಲಾಗುತ್ತಿದೆ. ಈ ಬೋರ್ಡು ರಚನೆಯಾದಮೇಲೆ ಈ 16 ಸೆಂಟರ್‌ಗಳನ್ನು ಬೋರ್ಡಿನ ವ್ಯಾಪ್ತಿಗೆ ಹೋಗುತ್ತವೆ. ಲೇಬರ್ ವೆಲ್‌ಫೇರ್ ಕಮಿಷನರ್ ಅವರು ಎಗ್ಸಿಕ್ಯೂಟಿವ್ ಆಫೀಸರ್ ಆಗಿರುತ್ತಾರೆ. ಸೆಕ್ಷನ್ 5 ಬೋರ್ಡ್ ರಚನೆಯಾಗುವುದರಿಂದ ಅಲ್ಲಿ ಸಿಬ್ಬಂದಿ ಇಲ್ಲ. ಆದ್ದರಿಂದ ಎಕ್ಸ್‌ಟ್ರಾ ಪವರ್ಸ್ ಕೊಡಬೇಕಾಗುತ್ತದೆ. ಇವರನ್ನು ಏಕಕ್ಕೆ ಅಪಾಯಿಂಟ್‌ಮೆಂಟ್ ಮಾಡಬೇಕು ಅಂದರೆ, ಲೇಬರ್ ವೆಲ್‌ಫೇರ್ ಕಮಿಷನರ್ ಅವರು ಪವರ್ಸ್ ಎಕ್ಸರ್‌ಸೈಜ್ ಮಾಡುವುದಕ್ಕಾಗುವುದಿಲ್ಲ. ಫ್ಯಾಕ್ಟರಿ ಹತ್ತಿರಕ್ಕೆ ಸಂಬಂಧಪಟ್ಟ ಲೆಕ್ಕಪತ್ರ ಇಟ್ಟಿದ್ದಾರೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಅವಕ್ಕೊಸ್ಕರ ಈ ಅಧಿಕಾರ ಇದೆ. ಲೇಬರ್ ಕಾನೂನು ಪ್ರಕಾರ ಫ್ಯಾಕ್ಟರಿ ಇನ್‌ಸ್ಪೆಕ್ಟರ್, ಲೇಬರ್ ಇನ್‌ಸ್ಪೆಕ್ಟರ್ ಎಂದು ಮಾಡಿದ್ದಾರೆ. ಅವರಿಗೆ ಸದ್ಯದಲ್ಲಿ ಅಧಿಕಾರ ಕೊಡುವುದಾಗಿದೆ. ಬೋರ್ಡ್ ಈ ಅಧಿಕಾರ ಚಲಾಯಿಸುವುದಕ್ಕಾಗುವುದಿಲ್ಲ. ಈ ವ್ಯತ್ಯಾಸ ತಿಳಿದುಕೊಂಡು ಹೇಳಬೇಕು ಎಂದು ನನ್ನ ಪ್ರಾರ್ಥನೆ.

ಶ್ರೀ ಸಿ. ಜೆ. ವಾಸುದೇವಪ್ಪ.—ಸರಕಾರ ಕೊಡುವ ಹಣ ಸರಿಯಾಗಿ ಏನೋಗ ಆಗಿದೆಯೇ ಇಲ್ಲವೇ ಎನ್ನುವುದನ್ನು ಆಡಿಟ್ ಮಾಡಲು ಆಡಿಟರ್ ಇರಲಿ. ಕೋ ಆಪರೇಟಿವ್ ಸೊಸೈಟಿಗಳಲ್ಲಿ ಈ ರೀತಿ ಒಂದು ವ್ಯವಸ್ಥೆ ಇದೆ. ಇನ್‌ಸ್ಪೆಕ್ಟರುಗಳಿಗೆ ಲೆಕ್ಕಪತ್ರ ತೋರಿಸಬೇಕು ಎಂಬ ಕ್ಲಾಜು ಇರಬೇಕಾಗಿತ್ತು. ಅವರಿಗೆ ಏನೇನು ಕೆಲಸ ಇದೆ ಹೇಳುತ್ತೀರಾ ? ಜೂಡಿಗೆ ಕೊಟ್ಟಿರುವ ಅಧಿಕಾರವನ್ನು ಸರಕಾರ ಸೂಪರ್‌ಸೀಡ್ ಮಾಡುತ್ತಾರೆ ಅಂದರೆ ಅದೇನು ಮಹಾ ಬುದ್ಧಿವಂತಿಕೆ ? ಏನು ಮಹಾ ಕಾರ್ಯ ? ಹೆಣ್ಣೇ ಬೇಜದ ಕಥೆ ನನಗೆ ನೆನಪಾಗುತ್ತದೆ ಹಾಗೆ ಮಾಡುತ್ತಾ ಇದೀರಿ. 18ನೇ ಕ್ಲಾಜ್‌ನೋ ದರೆ ಇದು ಗೊತ್ತಾಗುತ್ತದೆ. ಇದರಿಂದ ಕಾರ್ಮಿಕರ ಕ್ಷೇಮ ಸಾಧನೆಯಾಗುವುದಿಲ್ಲ. ಒಂದು ಹೊಸ ಬೋರ್ಡ್ ರಚನೆಮಾಡಿ ಅದಕ್ಕೆ ಚೇರಮನ್ ಎಂದು ನಿಮಗೆ ಬೇಕಾದವರನ್ನೊಬ್ಬರನ್ನು ನೇಮಕ ಮಾಡುವ ಸಮಾಧಾನಕ್ಕೋಸ್ಕರ ಇದನ್ನು ಮಾಡುತ್ತೀರಿ ! ಇದು ಸರಿಯಲ್ಲ. ಈಗ ಇರುವ ರೀತಿಯಲ್ಲಿ ಈ ಪುನರ್ರಚನೆಯನ್ನು ಒಪ್ಪುವುದು ಸಾಧ್ಯವಿಲ್ಲ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

MR. DEPUTY SPEAKER.—May I bring to the notice of the House that one hour has been allotted to this Bill ?

SRI D. DEVARAJ URS.—It depends upon the number of Speakers. I have no objection if the time is extended by another hour.

MR. DEPUTY SPEAKER.—Is it the pleasure of the House that the time should be extended by one hour ?

HON'BLE MEMBERS.—Yes.

†SRI S. RAJAGOPAL (Kolar Gold Fields) —Mr. Speaker, Sir, first of all, I would like to invite the attention of the Hon'ble Minister by welcoming this Bill to the apprehensions and fears and the true facts which have been placed by my hon'ble friend in this House for consideration by the Hon'ble Minister. Sir, for this reason only I am in a position to welcome this Bill. So far as money which is collected by way of fines are concerned they are mentioned in this Bill. This money is being spent by the management themselves, that is, employers. That has so far been vested in the employers. That right is now sought to be taken by the

(SRI S. RAJAGOPAL)

Government by creating this Board. It is really good for the State Government and particularly when we are speaking of socialism in this era. It is one way of helping the State Government to take the responsibility to see that the vested interests of the employers are taken away from the employers and vested in a Board. The money collected by the management so far from the workers, used to be spent by the management. Instead of that, this Board will get the power to spend that money. Forthat reason, first of all, I want to welcome this measure and I appreciate the Labour Minister's efforts to produce this Bill here.

The second thing is, while mentioning the constitution of the committees, it would have been better if he could clearly mention the number of persons. No doubt there is equal representation provided for employees and employers. But to avoid trouble between the labour and management, there should be a third party in the Committee. While I welcome all these things, definitely, there should be some number fixed and if that had been done, I think the apprehensions would have been avoided very easily. Now the Hon'ble Minister mentioned here so far as the Government s' attitude to give representation liberally particularly encouraging the INTUC. One way or the other it is encouraged. I do not fully agree with him anyhow. While taking the woman as representative to this Board, particularly, social and other workers also should be thought of. I think Sir, one more representation may be given to the Scheduled Castes, because most of the workers belong to the Scheduled Castes or Depressed Class community. In any welfare activity, that community should deserve any consideration and I do hope that the Minister will be pleased to consider to give representation to these Scheduled Castes community people also in this Board.

The Work of this Board has been mentioned—how the money will be spent. There are the functions of this Board. There it is clearly mentioned about social education centres including reading rooms, libraries. I wish to call the attention of the Minister to certain matters. Awarding of scholarships also can be made to be the responsibility of this Board, because most of the workers' children will be getting these scholarships because they must give money to them for further education.

Sri D. DEVARAJ URS.—May I draw the attention of the Hon'ble Member to sub-clause (i) of clause 8 ?

4-30 P.M.

Sri S. RAJAGOPAL.—That is the opinion of the Government.

Sri D. DEVARAJ URS.—That is the opinion of the Board.

Sri S. RAJAGOPAL.—However, I am inviting your kind attention to consider that aspect.

Sri D. DEVARAJ URS.—That is also one of the social welfare activities of the labour.

Sri S. RAJAGOPAL.—Another aspect to which I would like to invite the attention of the House is in regard to the expenditure, money to be spent on various activities as mentioned in the Bill. I have my own doubts as to how far this Board will be self-sufficient. I feel that it will take some years for the Board to stand on its own legs. But whatever, it may be the responsibility of the Government is there to see how best they can manage the Board.

